# 2

ಕ್ವಾರಿಯಲ್ಲಿ ಮನವಾಳನ್‌ಗೆ ಕೆಲಸ ಸಿಕ್ಕಾಗ ಆಗಷ್ಟೇ ಇಪ್ಪತ್ತು ದಾಟಿದ್ದ. ಆಗ ಆ ಜಾಗ ದಟ್ಟ ಗಿಡಮರಗಳಿಂದಲೂ, ಸುತ್ತಲೂ ಗುಡ್ಡಗಳಿಂದಲೂ, ಜೀವಂತ ಹಳ್ಳಕೊಳ್ಳಗಳಿಂದಲೂ ಕೂಡಿದ ತಾಣವಾಗಿತ್ತು. ಕೆಲಸ ಸಿಕ್ಕ ಕೆಲ ವರ್ಷಕ್ಕೆ ಅವನಿಗೊಂದು ಕ್ವಾಟರ್ಸ್ ಅಲಾಟಾಗಿತ್ತು. ಅದೇ ವರ್ಷ ಅವನ ಅವ್ವ ಚಿನ್ನವೇಣಿ ತೀರಿಕೊಂಡಿದ್ದಳು. ಅಪ್ಪ ತಂಗವೇಲು ಚಿಕ್ಕಂದಿನಲ್ಲೇ ಹೆಂಡತಿ, ಮಗನನ್ನು ಬಿಟ್ಟುಹೋಗಿದ್ದರಿಂದ ಮನವಾಳನ್‌ಗೆ ಅಪ್ಪನ ಮುಖವೇ ಮರೆತುಹೋಗಿತ್ತು. ಸೇರಿಕೊಂಡಿದ್ದ ಹೊಸತರಲ್ಲಿ ಫ್ಯಾಕ್ಟರಿಗೆ ಸುಣ್ಣಕಲ್ಲಿನ ಅದಿರನ್ನು ಸಾಗಿಸುತ್ತಿದ್ದ ಟ್ರ್ಯಾಲಿಗಳ ಬಳಿ ಕೆಲಸ ಮಾಡಿದ್ದ. ನಂತರ ಮೈನಿಂಗ್ ಜಾಗದಲ್ಲಿ. ಕಡೆಗೆ ಮುಖ್ಯ ಫೋರ್ಮನ್ ಆಗಿ ನಿವೃತ್ತಿಯಾಗಿದ್ದ.

ಪುಂಗೊಡಿ ಹಾಗೂ ಮನವಾಳನ್ ಒಬ್ಬರಿಗೊಬ್ಬರು ಇಷ್ಟಪಡಲು ಶುರುವಾಗುವ ಹೊತ್ತಿಗೆ ಮನವಾಳನ್‌ಗೆ ಕ್ವಾಟರ್ಸ್ ಸಿಕ್ಕಿ ಐದು ವರ್ಷಗಳು ಕಳೆದಿದ್ದವು. ಅವನ ಪಕ್ಕದ ಮನೆಯಲ್ಲಿದ್ದ ಗೆಳತಿಯನ್ನು ನೋಡಲು ಬರುತ್ತಿದ್ದ ಹೊತ್ತಲ್ಲಿ ಇಬ್ಬರಿಗೂ ಸ್ನೇಹ ಬೆಳೆದಿತ್ತು. ಪುಂಗೊಡಿ ಮನವಾಳನ್‌ನ ಮೇಲಾಧಿಕಾರಿ ಮಣಿಕಂಠನ್ ಮಗಳಾಗಿದ್ದಳು. ಹಿಂದಿಲ್ಲ ಮುಂದಿಲ್ಲದ ಮನವಾಳನ್‌ನನ್ನು ಅವಳು ಹಚ್ಚಿಕೊಂಡಿದ್ದ ಪರಿಗೆ, ಅವನ ಅನಾಥ ಬದುಕಿಗೆ ಕನಸುಗಳು ದಾಂಗುಡಿಯಿಟ್ಟಿದ್ದವು. ಆದರೆ ತನ್ನ ಕೈಕೆಳಗಿನ ಜುಜುಬಿ ಕೆಲಸಗಾರನಿಗೆ ತನಗಿದ್ದ ಒಬ್ಬಳೇ ಮಗಳನ್ನು ಕೊಡುವುದಿಲ್ಲವೆಂದು ಮಣಿಕಂಠನ್ ಹಟಕ್ಕೆ ಬಿದ್ದಿದ್ದ. ಕಡೆಗೊಂದು ದಿನ ಮನವಾಳನ್ ಹಾಗೂ ಪೂಂಗೊಡಿ ಹತ್ತಿರದ ಗಿಣಿ ರಾಮೇಶ್ವರ ವಜ್ರದ ದೇವಸ್ಥಾನದಲ್ಲಿ ಮದುಮಕ್ಕಳಾಗಿದ್ದರು. ಪೂಂಗೊಡಿಯ ಅಮ್ಮ ಇಳವರಸಿ 'ಸರೀಕರ ಎದುರಿಗೆ ತಲೆ ಎತ್ತದಂತೆ ಮಾಡಿಬಿಟ್ಟಳಲ್ಲ' ಅನ್ನುವ ಕೊರಗಿನಲ್ಲಿ ಹಾಸಿಗೆ ಹಿಡಿದವಳು ಮತ್ತೆ ಚೇತರಿಸಿಕೊಳ್ಳಲೇ ಇಲ್ಲ. ಅದಾದ ಕೆಲ ದಿನಕ್ಕೆ ಮಣಿಕಂಠನ್ ಸ್ವಯಂ ನಿವೃತ್ತಿ ಪಡೆದು ಕ್ವಾರಿಯಿಂದಲೇ ಖಾಲಿಯಾಗಿದ್ದ.

ಮಕ್ಕಳಾದ ಪೆರುಮಾಳ್ ಹಾಗೂ ಸೆಂಥಿಲ್ ಮದುವೆಯಾದ ವರ್ಷಕ್ಕೆ ಹುಟ್ಟಿದ್ದ ಅವಳಿಜವಳಿಗಳು. ಮಿಡ್ಲ್‌ಸ್ಕೂಲಿನವರೆಗೂ ಅಲ್ಲೇ ಓದಿ ನಂತರ ಫ್ಯಾಕ್ಟರಿಯ ಹತ್ತಿರವಿದ್ದ ಹೈಸ್ಕೂಲು ಮತ್ತು ಕಾಲೇಜನ್ನು ಮುಗಿಸಿ, ದೂರದ ಊರಿಗೆ ಎಂಜಿನಿಯರಿಂಗ್ ಕಲಿಯಲು ಹೋಗಿದ್ದರು. ಅದೂ ಮುಗಿದು ಇಬ್ಬರೂ ಬೆಂಗಳೂರಲ್ಲಿ ಕೆಲಸ ಹಿಡಿದಿದ್ದರು. ಆಗಿನ್ನೂ ಪೂಂಗೊಡಿ ಬದುಕಿದ್ದಳು. ಅವಳ ಸಾವಿನ ನಂತರ ಕ್ವಾರಿಯ ದಾರಿ ಅವರಿಗೆ ದೂರವಾಗತೊಡಗಿತ್ತು. ಪೂಂಗೊಡಿಯ ಸಾವಿಗಿನ್ನೂ ವರ್ಷ ತುಂಬುವುದಕ್ಕೂ ಮೊದಲೇ ಮಕ್ಕಳಿಬ್ಬರೂ ತಾವು ಒಪ್ಪಿದವರೊಂದಿಗೆ ರಿಜಿಸ್ಟರ್ ಮದುವೆ ಮಾಡಿಕೊಂಡಿದ್ದರು. ಹಾಗಾಗಿ ಮನವಾಳನ್‌ನ ಮಕ್ಕಳ ಮದುವೆಯ ಕನಸು ಕಣ್ಬಿಡುವುದಕ್ಕೂ ಮುನ್ನವೇ ಮುರುಟಿಕೊಂಡಿತ್ತು.

# 3

ತಾನು ಅದಾವ ಕಾರಣಕ್ಕೆ ನೆಲದ ಮೋಹಕ್ಕೆ ಬಿದ್ದೆ, ಅಂತ ಇಳಿ ವಯಸ್ಸಿನಲ್ಲಿ ಆಗಾಗ ಖುದ್ದು ಮನವಾಳನ್‌ಗೇ ಅನಿಸಿದ್ದುಂಟು. ಆಗ ಅಲ್ಲಿ ಭೂಮಿಗೆ ಅಷ್ಟೊಂದು ಬೆಲೆ ಇಲ್ಲದ್ದರಿಂದಲೋ, ಕ್ವಾಟರ್ಸ್‌ನಲ್ಲಿದ್ದ ಬಹುತೇಕರು ದೂರದ ಊರುಗಳಿಂದ, ಅಕ್ಕಪಕ್ಕದ ರಾಜ್ಯಗಳಿಂದ ಬಂದವರಾಗಿದ್ದರಿಂದಲೋ, ಅವರಾರಿಗೂ ನೆಲ ಕೊಳ್ಳುವ ಬಗ್ಗೆ ಅಷ್ಟು ಹುರುಪು ಇಲ್ಲದ್ದರಿಂದಲೋ, ಅಂತೂ ಹೂ ಎತ್ತಿದಂತೆ ಹೊಲವನ್ನು ಕೊಂಡುಕೊಂಡಿದ್ದ. ಯಾವುದಕ್ಕೂ ಋಣ ಇರಬೇಕು, ಇಲ್ಲಾ ಅಂದರೆ ತಿಪ್ಪರಲಾಗ ಹೊಡೆದರೂ ಕೈ ಹತ್ತಲ್ಲ, ಅಂತ ತನ್ನ ನಸೀಬಿನ ಬಗ್ಗೆ ಪೂಂಗೊಡಿಗೆ ಹೇಳುತ್ತಾ ಸಂಭ್ರಮಿಸುತ್ತಿದ್ದ. ಅದು ಕ್ವಾಟರ್ಸ್‌ನಿಂದ ಎರಡು ಮೈಲಿ ದೂರದಲ್ಲಿತ್ತು. ಮನವಾಳನ್ ಮತ್ತು ಪೂಂಗೊಡಿಗೆ ಅದು ಬಿಡುವಿನ ವೇಳೆಯ ಮತ್ತೊಂದು ಮನೆಯಾಗಿಹೋಗಿತ್ತು. ಕೊಂಡ ಕೂಡಲೇ